'ಈ ಬಸ್ಸಿಗೆ ಏಕಾದ್ರು ಬಂದೆನೋ...?' ಎಂದು ಇದೂ ಸೇರಿ ಒಂದಿಪ್ಪತ್ತು ಬಾರಿ ಮಧು ತನ್ನ ಮನಸ್ಸಿನಲ್ಲಿ ತನಗೆ ತಾನೇ ಬೈದುಕೊಂಡಳು. 'ಕೈ ತುಂಬಾ ಸಂಬಳ ಬರುವ ಕೆಲಸವಿದೆ. ಬೇರೇನೂ ಹೆಚ್ಚಿನ ಖರ್ಚಿಲ್ಲ. ಜುಮ್ ಅಂತ ಟ್ಯಾಕ್ಸಿ ಮಾಡ್ಕೊಂಡು ಬರಬಹುದಿತ್ತಲ್ಲ. ಯಾವಾಗ್ಲೂ ಹೀಗೇ ನಾನು, ಬೇಕಾದಾಗ ಅನುಕೂಲ ನೋಡ್ಕೊಳ್ಳೋಲ್ಲ. ಬೇಡದಿದ್ದಾಗ ಪುಸಕ್ಕಂತ ಕಾರೋ ಆಟೋನೋ ಹತ್ತಿಬಿಟ್ಟೀನಿ...' ಎಂದು ಪುನಃ ಅಸಮಾಧಾನಪಡುತ್ತಾ ಕಿಟಕಿಯ ಪಕ್ಕದ ಸೀಟು ಸಿಗಲಾರದ ಬೇಸರಕ್ಕೆ ಮತ್ತಷ್ಟು ವ್ಯಗ್ರಳಾದಳು. ಬಸ್ಸಿನೊಳಗಿದ್ದ ಜನರ ಮೈಯ ದುರ್ಗಂಧ, ಬೇಸಗೆಯ ಬಿಸಿಲ ಧಗೆಗೆ ಮೈಯ ಸಂಧಿಗೊಂದಿಗಳಿಂದ ಕಿತ್ತು ಬರುತ್ತಿದ್ದ ಅವಳದ್ದೇ ಮೈ ಬೆವರು ಅವಳಿಗೆ ರೇಜಿಗೆ ಹುಟ್ಟಿಸಿತು. ಬಸ್ಸಿನಲ್ಲಿ ತುಂಬಾ ಜನರಿದ್ದು ಸರಿಯಾಗಿ ಗಾಳಿಯೂ ಆಡುತ್ತಿರಲಿಲ್ಲ. 'ಈ ಡ್ರೈವರ್ ಇನ್ನೂ ಅದ್ಯಾರ್ಗೆ ಕಾಯ್ತಿದ್ದಾನೋ...? ಬಸ್ಸು ಮುಂದಕ್ಕೆ ಹೊರಟರೆ ಸ್ವಲ್ಪ ಗಾಳಿನಾದ್ರೂ ಬೀಸಿ ಸಮಾಧಾನ ಆಗ್ತೋದು...' ಅಂತ ಕೆಲವರು ಗಟ್ಟಿಯಾಗೇ ಗೊಣಗಿಕೊಳ್ತಿದ್ರು.

ಮಧು ಮನಸ್ಸು ಎಷ್ಟು ಗಡಿಬಿಡಿಯಲ್ಲಿತ್ತೆಂದರೆ, ಅವಳಿಗೆ ತನ್ನ ಅಕ್ಕಪಕ್ಕ ಕೂಡ ಸರಿಯಾಗಿ ಗಮನಿಸಲಾಗಲಿಲ್ಲ. ಕಂಡಕ್ಟರ್ ಎಲ್ಲರಿಗೂ ಟಿಕೇಟು ಕೊಡುತ್ತಾ ಬಂದು 'ಎಲ್ಲಮ್ಮಾ?' ಎಂದು ಕೇಳಿದಾಗ 'ಕಾವೇರಿ ಭವನ' ಎಂದವಳೇ ಸರಿಯಾದ ಚಿಲ್ಲರೆ ಕೊಟ್ಟು ಟಿಕೇಟು ಪಡೆದಳು. ಬಸ್ಸಿನವರಿಂದ ಚಿಲ್ಲರೆ ಪಡೆಯೋದು ಅವಳಿಗೆ ಸೇರುವುದಿಲ್ಲ. ಎಂಜಲು ಹಚ್ಚಿಕೊಡುವ ಟಿಕೇಟು, ಚಿಲ್ಲರೆ ನೋಟುಗಳನ್ನು ತೆಗೆದುಕೊಳ್ಳುವುದೆಂದರೆ ಅವಳಿಗೆ ವಾಕರಿಕೆ.

ಬಸ್ಸು ಅಂತೂ ಇಂತೂ ಹೆಬ್ಬಾಳ ಬಿಟ್ಟು ಹೊರಟರೂ ಮೇಕ್ರಿ ಸರ್ಕಲ್ ದಾಟಿ ಬಾಲಬ್ರೂಯಿ ಸಿಗ್ನಲ್ ತಲುಪೋಕೆ ಒಂದು ಗಂಟೆಗೂ ಹೆಚ್ಚು ಸಮಯ ತೆಗೆದುಕೊಂಡದ್ದಕ್ಕೆ ಮಧು ಮನಸ್ಸು ಕುದ್ದುಹೋಯ್ತು. ಅದರ ನಡುವೆ ಏನೇನೋ ಯೋಚನೆಗಳು ಬಂದವು. 'ಬಸ್ಸಿಂದ ಇಳಿದು ಆಟೋ ಹತ್ತಿಬಿಡಲಾ? ಕ್ಯಾಬ್ ಬುಕ್ ಮಾಡಿಕೊಳ್ಳಲಾ? ಅಥವಾ ಈ ದಿನ ಒಂದು ರಜೆ ಹಾಕಿಕೊಳ್ಳಲಾ? ರಜೆ ಹಾಕಿದ್ರೂ ಪುನಃ ಹಾಸ್ಟೆಲ್‌ಗೇ ಹೋಗಿ ಮಾಡೋದೇನಿದೆ? ಅದೇ ಟೀವಿ! ಆಟೋ ಹತ್ತಿದ್ರೂ ಒಂದೇ, ಕ್ಯಾಬ್ ಮಾಡ್ಕೊಂಡ್ರೂ ಒಂದೇ... ಇದೇ ರಸ್ತೇಲಿ ತಾನೆ ಹೋಗಬೇಕು? ರಸ್ತೆ ತುಂಬಾ ಬರೀ ವಾಹನಗಳೇ ಇರೋವಾಗ ಅವರ ತಾನೇ ಏನು ಮಹಾ..., ಮೇಲೆ ಆಕಾಶದಲ್ಲಿ ಹಾರಿಸಿಕೊಂಡು ಹೋಗುತ್ತಾರಾ...?' ಹೀಗೆ ಮಧು ಮನಸ್ಸು ತರ್ಕ ವಿತರ್ಕ ವಿವೇಚಿಸದೇ ಕ್ಷಣಕ್ಕೊಂದು ಯೋಚಿಸುತ್ತಿತ್ತು. 'ಅಲ್ಲದೆ ಈ ತಿಂಗಳಿನ ಮುಟ್ಟು ಕೂಡ ವಾರವಾದರೂ ಆಗದೇ ಸ್ಕಿಪ್ ಆಗಿದೆ... ಮುಂದಿನ ವಾರ ಹಬ್ಬದ ಟೈಂಗೆ ಆಗಿಬಿಟ್ಟರೆ ಏನು ಮಾಡೋದಪ್ಪಾ ಒಳ್ಳೆ ಕಿರಿಕಿರಿ...' ಅಂತಾನೂ ಯೋಚಿಸುತ್ತಿದ್ದಳು. ಹೀಗೆ ಆ ಬಸ್ಸೂ ಸಹ ಮಧುವಿನ ದ್ವಂದ್ವ ಮನಸ್ಸಿನಂತೆಯೇ ಅಲ್ಲಲ್ಲಿ ನಿಂತೂ ನಿಂತೂ ಸಾಗುತ್ತಿತ್ತು. ಅದಕ್ಕೆ ಬೆಂಗಳೂರು ಟ್ರಾಫಿಕ್ಕೆಂದು ಹೆಸರು ಬೇರೆ...

ಮಧು ಸದ್ಯ ಉದ್ಯೋಗ ನಿಮಿತ್ತ ಬೆಂಗಳೂರು ನಿವಾಸಿ. ಅವಳ ಗಂಡ ಪ್ರಭು ತನ್ನ ತಂದೆತಾಯಿಯರ ಜೊತೆ ಮಂಡ್ಯ ಬಳಿಯ ಸೋಮನಹಳ್ಳಿಯಲ್ಲಿ ಇರೋದು. ಅವರಿಗೆ ಮನೆ–ಮನ ತುಂಬಿರುವ ಆರು ವರ್ಷದ ಚಿನಕುರಳಿ ಚಿನ್ಮಯಿ ಒಬ್ಬನೇ ಮಗ. ಪ್ರಭು ಬಿ.ಇ., ಎಂ.ಎಸ್. ಓದಿ, ಒಂದಷ್ಟು ದಿನ ಕಂಪನಿಯೊಂದರಲ್ಲಿ ದುಡಿದು, ವಿದೇಶಕ್ಕೂ ಹೋಗಿ ಬಂದಿದ್ದ. ತನ್ನ ಉದ್ಯೋಗದ ಒತ್ತಡಗಳಿಗೆ ಬೇಸತ್ತು, ಇಂತಹ ಕೆಲಸಕ್ಕಿಂತಲೂ ನೀರಾವರಿಯಿರುವ ಗದ್ದೆ ತೋಟಗಳ ಉಸ್ತುವಾರಿಯೇ ಸರಿ ಎಂದುಕೊಂಡಿದ್ದ. ಅಲ್ಲದೇ ಎಷ್ಟೇ ಪ್ರೀತಿಯಿಂದ ತಾವು ಕರೆದರೂ ಪಟ್ಟಣದ ಮನೆಗೆ ಬಂದು ತಮ್ಮೊಡನೆ ಇರಲು ಮನಸ್ಸು ಕೊಡದ ಇಳಿವಯಸ್ಸಿನ ತಂದೆತಾಯಿಗಳ ಜೊತೆಗೆ ಬದುಕುವುದು ತನ್ನ ಕರ್ತವ್ಯ ಸಹ ಎಂದುಕೊಂಡು ಊರ ದಾರಿ ಹಿಡಿದಿದ್ದ. ಈಗಾತ ಒಬ್ಬ ಯಶಸ್ವೀ ಪ್ರಗತಿಪರ ರೈತ. ಸಾವಯವ ಕೃಷಿಕ.

ಆದರೆ, 'ಊರಿಗೆ ಹೋಗಿ ಬಿಡೋಣ ಮಧು' ಎಂದ ಪ್ರಭುವಿನ ಮಾತಿಗೆ ಮಧು ಒಪ್ಪಿರಲಿಲ್ಲ. ಮದುವೆಗೂ ಮುನ್ನವೇ ಕಷ್ಟಪಟ್ಟು ಗಳಿಸಿದ್ದ, ಅದೂ ಮೆರಿಟ್ಟಿನ ಮೇಲೆ ಸಿಕ್ಕಿರುವ 'ಸರಕಾರಿ ಉದ್ಯೋಗವನ್ನು ಬಿಡೋದು ಹೇಗೆ?' ಎನ್ನುತ್ತಾ ಮಧು – 'ಪ್ಲೀಸ್ ಪ್ರಭು, ಮತ್ತೊಂದಷ್ಟು ವರುಷ ಸರಕಾರದ ಸೇವೆ ಸಲ್ಲಿಸುವೆ. ಸರಕಾರದ ಉದ್ಯೋಗ ಎಲ್ಲರಿಗೂ ಅಷ್ಟು ಸುಲಭವಾಗಿ ಸಿಗೋಲ್ಲ. ಅದು ನಿಮಗೂ ಗೊತ್ತಲ್ವಾ? ಇಲ್ಲಿ ಒಬ್ಬಳೇ ಆಗಿಬರದಿದ್ದರೆ ನಾನೂ ಊರಿಗೇ ಮರಳುವೆ' ಎಂದು ಹೇಳಿ ಅವನನ್ನು ಹಾಗೂ ಅತ್ತೆ ಮಾವರನ್ನು ಒಪ್ಪಿಸಿದ್ದಳು. ಅಲ್ಲದೇ ತಾನೇ ವಾರಕ್ಕೊಮ್ಮೆ ಊರಿಗೆ ಬರುವುದಾಗಿ ಹೇಳಿದ್ದಳು. ಆದರೆ ಪ್ರಭು ಮಾತ್ರ ಮಗ ಚಿನ್ಮಯಿಯನ್ನು ಹಳ್ಳಿಯ ಸ್ವಚ್ಛ ಪರಿಸರದಲ್ಲೇ ಬೆಳೆಸಲು ನಿರ್ಧರಿಸಿ, ಅಜ್ಜ ಅಜ್ಜಿಯರ ಆರೈಕೆ–ಹಾರೈಕೆ ಮಗುವಿಗೆ ಬೇಕೆಂದು ಮಗನನ್ನು ಊರಿಗೇ ಕರೆದೊಯ್ದನು. ಈ ವಿಚಾರದಲ್ಲಿ ಮಾತ್ರ ಮಧುವಿನೊಡನೆ ಪ್ರಭು ರಾಜಿಯಾಗಲಿಲ್ಲ. ಹಾಗಾಗಿ, ಮನೆಯವರು ಯಾರೂ ಇಲ್ಲದಿದ್ದರಿಂದ ಮಧುವಿಗೆ ತನಗೊಬ್ಬಳಿಗೆ ಬೇರೆ ಬಾಡಿಗೆ ಮನೆ ಏಕೆಂದು ಅದರ ಗೋಜಿಗೆ ಹೋಗದೆ, ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್‌ನಲ್ಲಿ ಉಳಿದುಕೊಂಡಳು. ವಾರಕ್ಕೊಮ್ಮೆ ಊರಿಗೆ ಹೋಗಿ ಬರುತ್ತಾ ಹೇಗೋ ಸಂಭಾಳಿಸಿಕೊಂಡು ಹೋಗುತ್ತಿದ್ದಳು.

ಏನೇ ಆದರೂ ಮಧುವಿಗೆ ಅತ್ತೆ–ಮಾವ, ಗಂಡನ ಬೆಂಬಲವಿತ್ತು. ಆದರೆ ವಿರೋಧಿಸುತ್ತಿದ್ದದ್ದು ಮಾತ್ರ ಮಗ ಚಿನ್ಮಯಿ. ಆಕೆ ಬೆಂಗಳೂರಿನಿಂದ ಊರಿಗೆ ಬಂದಾಗ ಗರಿಬಿಚ್ಚಿ ಹಾರುವ ನವಿಲಾಗುತ್ತಿದ್ದ ಚಿನ್ಮಯಿ, ಆಕೆ ಪುನಃ ಊರಿನಿಂದ ಹೊರಟು ನಿಂತಾಗಲೆಲ್ಲಾ ತಾಯಿಕರುಳು ಕಿತ್ತು ಬರುವಂತೆ ರೋದಿಸುತ್ತಿದ್ದ. ಪಾಪ, ಅವನಿಗಿನ್ನೂ ಆರೇ ವರ್ಷ. ಆಕೆ ಹೊರಟು